ಲಿಂಗಸಗೂರು ತಾಲ್ಲೂಕಿನ ವಸತಿನಿಲಯಗಳ ಮಂಜೂರಾತಿ

564 (808) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಲಿಂಗಸಗೂರು ತಾಲ್ಲೂಕಿನ ಲಿಂಗಸಗೂರು ಪಟ್ಟಣಕ್ಕೆ ಮೆಟ್ರಿಕ್ ನಂತರದ ಬಿಸಿಎಂ ವಸತಿ ನಿಲಯವನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

2) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) -ಇಲ್ಲ-.

ಆ) ಉದ್ಭವಿಸುವುದಿಲ್ಲ.

ಮೊರಾರ್ಜಿ ವಸತಿ ಶಾಲೆಯ ಕಾಮಗಾರಿ

565 (809) ಶ್ರೀ ಅಮರೇಗೌಡ ಪಾಟೀಲ್ (ಬಯ್ಯಾಪುರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ರಾಜ್ಯದಲ್ಲಿ ಒಟ್ಟು ಎಷ್ಟು ಮೊರಾರ್ಜಿ ವಸತಿ ಶಾಲೆಗಳನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರು ಮಾಡಲಾಗಿದೆ; ವಿವರಗಳನ್ನು ಒದಗಿಸುವುದು;

2) ಅವುಗಳ ನಿರ್ಮಾಣದ ಕಾಮಗಾರಿಯನ್ನು ಯಾವ ಆಧಾರದ ಮೇಲೆ, ಯಾವ ಸಂಸ್ಥೆಗೆ ನೀಡಲಾಗಿದೆ;

3) ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿಗೆ ಮಂಜೂರಾಗಿರುವ ವಸತಿ ಶಾಲೆಯ ನಿರ್ಮಾಣದ ಕಾಮಗಾರಿಯನ್ನು ಯಾವ ಸಂಸ್ಥೆಗೆ ನೀಡಲಾಗಿದೆ; ಕಳಪೆ ಕಾಮಗಾರಿಯನ್ನು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ;

4) ಸದರಿ ಕಟ್ಟಡದ ಕಾಮಗಾರಿಯು ಈಗ ಯಾವ ಹಂತದಲ್ಲಿದೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಸಮಾಜ ಕಲ್ಯಾಣ ಇಲಾಖೆಯು ರಾಜ್ಯದಲ್ಲಿ ಒಟ್ಟು 77 ಮೊರಾರ್ಜಿ ದೇಸಾಯಿ/ನವೋದಯ ಮಾದರಿ ವಸತಿ ಶಾಲೆಗಳನ್ನು ಮಂಜೂರು ಮಾಡಿದೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ಈ ಕೆಳಕಂಡ 5 ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಂಸ್ಥೆಗಳಿಗೆ ಸ್ಪರ್ಧಾತ್ಮಕ ದರದ ಆಧಾರದ ಮೇಲೆ ಕಾಮಗಾರಿಯನ್ನು ವಹಿಸಲಾಗಿದೆ:

ಕೇಂದ್ರ ಸರ್ಕಾರದ ಸಂಸ್ಥೆಗಳಾದ:

1. ನ್ಯಾಷನಲ್ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ - 2
2. ನ್ಯಾಷನಲ್ ಪ್ರಾಜೆಕ್ಟ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ - 16

3. ಮೆಕಾನ್ ಲಿಮಿಟೆಡ್ - 10

4. ಎಜುಕೇಷನಲ್ ಕನ್ಸಲ್‌ಟೆಂಟ್ಸ್ ಇಂಡಿಯಾ ಲಿಮಿಟೆಡ್ - 11

ರಾಜ್ಯ ಸರ್ಕಾರದ ಸಂಸ್ಥೆಗಳಿಂದ:

5. ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ - 5

ಆ) ಈ ಕೆಳಕಂಡ 2 ಸಂಸ್ಥೆಗಳು ತಯಾರಿಸಿ ಸಲ್ಲಿಸಿದ ಅಂದಾಜು ವೆಚ್ಚದ ಆಧಾರದ ಮೇಲೆ 3 ವಸತಿ ಶಾಲೆಗಳ ಕಾಮಗಾರಿಯನ್ನು ವಹಿಸಲಾಯಿತು:

1. ಕರ್ನಾಟಕ ಭೂ ಸೇನಾ ನಿಗಮ - 2

2. ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ - 1

ಇ) 2002-03ನೇ ಸಾಲಿನಲ್ಲಿ ಟೆಂಡರ್ ಕರೆದು ಈ ಕೆಳಕಂಡ ಸರ್ಕಾರದ ಮತ್ತು ಖಾಸಗೀ ಸಂಸ್ಥೆಗಳಿಗೆ ಕಾಮಗಾರಿಯನ್ನು ನೀಡಲಾಗಿದೆ:

1. ಕರ್ನಾಟಕ ಭೂ ಸೇನಾ ನಿಗಮ - 3

2. ಇಂಜಿನಿಯರಿಂಗ್ ಪ್ರಾಜೆಕ್ಟ್ ಇಂಡಿಯಾ ಲಿಮಿಟೆಡ್ - 1

3. ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ - 10

4. ಐ.ವಿ.ಆರ್.ಸಿ.ಎಲ್. - 2

5. ಮೈಸೂರು ಕನ್‌ಸ್ಟ್ರಕ್ಷನ್ ಕಂಪನಿ - 2

ಕೇಂದ್ರ ಸರ್ಕಾರದ ಸಂಸ್ಥೆಯಾದ ಎಜುಕೇಷನಲ್ ಕನ್ಸಲ್‌ಟೆಂಟ್ಸ್ ಇಂಡಿಯಾ ಲಿಮಿಟೆಡ್‌ಗೆ ಕಾಮಗಾರಿಯನ್ನು ವಹಿಸಲಾಗಿದೆ. ಕಳಪೆ ಕಾಮಗಾರಿಯೆಂದು ಬಂದ ದೂರಿನನ್ವಯ ಮುಖ್ಯ ಅಭಿಯಂತರರು (ಕಟ್ಟಡ ಮತ್ತು ಸಂಪರ್ಕ), ದಕ್ಷಿಣ ಲೋಕೋಪಯೋಗಿ ಇಲಾಖೆ, ಇವರನ್ನು ಗುಣ ಮಟ್ಟವನ್ನು ಪರೀಕ್ಷೆ ಮಾಡಲು ಕೋರಲಾಗಿತ್ತು. ಅದರಂತೆ, ಅವರ ವರದಿ ದಿನಾಂಕ: 20/5/2002 ರಲ್ಲಿ ಗುಣಮಟ್ಟ ತೃಪ್ತಿಕರವಾಗಿದೆ ಎಂದು ತಿಳಿಸಿದ್ದಾರೆ. ಆದುದರಿಂದ ಕಳಪೆ ಕಾಮಗಾರಿ ಆಗಿಲ್ಲ.

ಗುಣಮಟ್ಟದ ಪರಿಶೀಲನೆಗಾಗಿ ಕಾಮಗಾರಿಯನ್ನು ನಿಲ್ಲಿಸಲಾಗಿತ್ತು. ಪುನಃ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ. ಕಾಮಗಾರಿಯು ಈ ಕೆಳಕಂಡ ಹಂತದಲ್ಲಿದೆ:

ಶಾಲಾ ಕಟ್ಟಡ, ಅಡಿಗೆ ಮತ್ತು ಊಟದ ಮನೆ: ಮುಕ್ತಾಯದ ಹಂತ ತಲುಪಿದೆ

ಬಾಲಕಿಯರ ವಸತಿ ನಿಲಯ: ನೆಲಹಾಸು ಮತ್ತು ಗಿಲಾವು ಕೆಲಸದ ಹಂತದಲ್ಲಿದೆ.

ಬಾಲಕರ ವಸತಿ ನಿಲಯ: ಕಟ್ಟಡ ಮತ್ತು ಛಾವಣಿ ಕೆಲಸದ ಹಂತದಲ್ಲಿದೆ.

ಸಿಬ್ಬಂದಿ ವಸತಿ ಗೃಹಗಳು: ಗೋಡೆ ಕಟ್ಟುವ ಹಂತದಲ್ಲಿದೆ.

ಅನುಬಂಧ-1

ಬಾಗಲಕೋಟೆ	ಬಾಗಲಕೋಟೆ	1.	ಮುಚಖಂಡಿ
		2.	ಶಿರೂರು
	ಜಮಖಂಡಿ	3.	ಹಿಪ್ಪರಗಿ
	ಮುಧೋಳ್	4.	ಲೋಕಾಪುರ
		5.	ಮುಧೋಳ್ (ನ)
ಬೆಂಗಳೂರು (ಗ್ರಾ)	ಚನ್ನಪಟ್ಟಣ	6.	ಚನ್ನಪಟ್ಟಣ (ನ)
	ಹೂಸಕೋಟೆ	7.	ಸೂಲಿಬೆಲೆ
	ಕನಕಪುರ	8.	ದೊಡ್ಡ ಮರಳವಾಡಿ
ಬೆಂಗಳೂರು (ನಗರ)	ಆನೇಕಲ್	9.	ಯಮಲೂ
	ಬೆಂಗಳೂರು (ಉ)	10.	ಅಡಕಿಮಾರನಹಳ್ಳಿ (ನ)
ಬೆಳಗಾವಿ	ಅಥಣಿ	11.	ಮುರಗುಂಡಿ
	ಬೈಲಹೊಂಗಲ	12.	ಬೈಲಹೊಂಗಲ (ನ)
		13.	ಬೆಳಗಾವಿ
	ಹುಕ್ಕೇರಿ	14.	ಹಿಡಕಲ್ ಡ್ಯಾಂ (ನ)
		15.	ನಿಡಸೋಸಿ (ಸಂಕೇಶ್ವರ)
	ಸವದತ್ತಿ	16.	ಯಲ್ಲಮ್ಮನಗುಡ್ಡ
ಬಳ್ಳಾರಿ	ಬಳ್ಳಾರಿ	17.	ಬಳ್ಳಾರಿ
	ಹರಪನಹಳ್ಳಿ	18.	ಮೊದಲಘಟ್ಟ (ನ)
	ಹಗರಿಬೊಮ್ಮನಹಳ್ಳಿ	19.	ವಲ್ಲಭಾಪುರ
	ಹೊಸಪೇಟೆ	20.	ತಿಮ್ಮಲಾಪುರ
ಬೀದರ್	ಔರಾದ್	21.	ಸಂತಪುರ
	ಬೀದರ್	22.	ಬಗದಲ್
		23.	ಬೀದರ್
ಬಿಜಾಪುರ	ಇಂಡಿ	24.	ಹೊರ್ತಿ (ನ)
		25.	ಮುರಗೂರ
	ಮುದ್ದೇಬಿಹಾಳ	26.	ನಲ್ಲತವಾಡ

ಚಾಮರಾಜನಗರ	ಗುಂಡ್ಲುಪೇಟೆ	27.	ಗುಂಡ್ಲುಪೇಟೆ
	ಕೊಳ್ಳೇಗಾಲ	28.	ಹನೂರು (ಇನ್ನೂ ಪ್ರಾರಂಭವಾಗಿಲ್ಲ)
ಚಿಕ್ಕಮಗಳೂರು	ಕಡೂರು	29.	ಕಾಮನಕೆರೆ
		30.	ಕಡೂರು ಟೌನ್
	ಕೊಪ್ಪ	31.	ಹರಿಹರಪುರ
ಚಿತ್ರದುರ್ಗ	ಹಿರಿಯೂರು	32.	ವಿ.ವಿ.ಪುರ
ದಾವಣಗೆರೆ	ಚನ್ನಗಿರಿ	33	ಕಾರಿಗನೂರು
	ಹರಪನಹಳ್ಳಿ	34	ಹಲುವಾಗಿಲು
	ಹರಿಹರ	35	ದೇವರಬೆಳಕೆರೆ
		36	ನಂದಿಗುಡಿ
ದ. ಕನ್ನಡ	ಬೆಳ್ತಂಗಡಿ	37.	ಮಚ್ಚಿನ
		38.	ಬೆಳ್ತಂಗಡಿ (ನ)
	ಮಂಗಳೂರು	39.	ಮೂಡಬಿದ್ರಿ
ಧಾರವಾಡ	ಧಾರವಾಡ	40.	ಹೆಬ್ಬಳ್ಳಿ
	ಹುಬ್ಬಳ್ಳಿ	41.	ಹುಬ್ಬಳ್ಳಿ
ಗದಗ	ಗದಗ	42.	ಮುಳಗುಂದ
	ರೋಣ	43.	ಕಾಲಕಾಲೇಶ್ವರ
	ಶಿರಹಟ್ಟಿ	44.	ಲಕ್ಷ್ಮೇಶ್ವರ
ಗುಲ್ಬರ್ಗ	ಅಫಜಲಪುರ	45.	ಅಫಜಲಪುರ
		46.	ಕೂಗನೂರು
	ಅಳಂದ	47.	ತಡಕಲ್
	ಜೇವರ್ಗಿ	48.	ಜೇವರ್ಗಿ (ನ)
	ಸೇಡಂ	49.	ಮಳಖೇಡ (ನ)
	ಶಹಾಪುರ	50.	ಶಹಾಪುರ
	ಯಾದಗಿರಿ	51.	ಯಾದಗಿರಿ

ಹಾಸನ	ಚೆನ್ನರಾಯಪಟ್ಟಣ	52.	ಗುರುಮಾರನಹಳ್ಳಿ
	ಹೊಳೆನರಸೀಪುರ	53.	ಹರಿಹರಪುರ
	ಹಾಸನ	54.	ದುದ್ದ
ಹಾವೇರಿ	ಹಾನಗಲ್	55.	ಹಳ್ಳಿ ಬೈಲು
	ಸವಣೂರು	56.	ಸವಣೂರು
ಕೋಲಾರ	ಬಂಗಾರಪೇಟೆ	57.	ಕೆ.ಜಿ.ಎಫ್.
	ಚಿಂತಾಮಣಿ	58.	ಏನಿಗದೆಲಿ
	ಶ್ರೀನಿವಾಸಪುರ	59.	ಸೋಮಯಾಜಲಪಲ್ಲಿ
ಕೊಪ್ಪಳ	ಗಂಗಾವತಿ	60.	ಸಿದ್ದಾಪುರ
ಮಂಡ್ಯ	ಮಳವಳ್ಳಿ	61.	ಕಿರುಗಾವಲು
		62.	ಬಾಚನಹಳ್ಳಿ
	ಮಂಡ್ಯ	63.	ತಂಗಳಗೆರೆ
	ನಾಗಮಂಗಲ	64.	ಕೋಟೆಬೆಟ್ಟ
	ಶ್ರೀರಂಗಪಟ್ಟಣ	65.	ಶ್ರೀರಂಗಪಟ್ಟಣ (ನ)
ಮೈಸೂರು	ಮೈಸೂರು	66.	ದೊಡ್ಡಹುಂಡಿ
	ನಂಜನಗೂಡು	67.	ನಂಜನಗೂಡು
ರಾಯಚೂರು	ದೇವದುರ್ಗ	68.	ಜಾಲಹಳ್ಳಿ
	ಲಿಂಗಸಗೂರು	69.	ಲಿಂಗಸಗೂರು
	ರಾಯಚೂರು	70.	ರಾಯಚೂರು (ನ)
ಶಿವಮೊಗ್ಗ	ಭದ್ರಾವತಿ	71.	ಅನವೇರಿ
	ಶಿಕಾರಿಪುರ	72.	ಶಿರಾಳಕೊಪ್ಪ
	ಶಿವಮೊಗ್ಗ	73.	ಶಿವಮೊಗ್ಗ
ತುಮಕೂರು	ಮಧುಗಿರಿ	74.	ಬೇಡತ್ತೂರು
ಉಡುಪಿ	ಉಡುಪಿ	75.	ಬ್ರಹ್ಮಾವರ
ಉತ್ತರ ಕನ್ನಡ	ಮುಂಡಗೋಡು	76.	ಮುಂಡಗೋಡು
	ಯಲ್ಲಾಪುರ	77.	ಮಾಗೋಡು ಫಾಲ್ಸ್